# ಕನ್ನಡ ಸಾಹಿತ್ಯ ಪರಿಷತ್ತು(ನೋಂ)

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪, ೨೨೪೨೩೮೬೭, ೨೬೬೭೨೯೯೨
ಸ್ಥಾಪನೆ : ೧೯೧೫
http://www.kasapa.in e-mail : kannadaparishattu@gmail.com

ದಿನಾಂಕ : ೧ನೆಯ ಮಾರ್ಚ್ ೨೦೨೩

ಕನ್ನಡ ಸಾಹಿತ್ಯ ಪರಿಷತ್ತಿನ ನಿಯಮ-ನಿಬಂಧನೆಗಳು (೩೦)ರ ಪ್ರಕಾರ ಕರೆದಿರುವ

## ವಾರ್ಷಿಕ ಸಾಮಾನ್ಯ ಸಭೆಯ ತಿಳುವಳಿಕೆಯ ಪತ್ರ

ಪರಿಷತ್ತಿನ ೧೦೬ನೆಯ ಹಾಗೂ ೨೦೨೧-೨೨ನೆಯ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ ೨೬-೦೩-೨೦೨೩ರ ಭಾನುವಾರ ಬೆಳಗ್ಗೆ ೧೧.೦೦ ಗಂಟೆಯಿಂದ ವಿಜಯಪುರ ಜಿಲ್ಲೆಯ ವಿಜಯಪುರದ ಸ್ಟೇಷನ್ ರಸ್ತೆಯಲ್ಲಿರುವ "ಕಂದಗಲ್ ಶ್ರೀ ಹಣಮಂತರಾಯ ರಂಗಮಂದಿರ"ದಲ್ಲಿ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಈ ಸಭೆಯಲ್ಲಿ ಕೆಳಕಂಡ ವಿಷಯಗಳ ಕುರಿತು ಚರ್ಚಿಸಿ, ತೀರ್ಮಾನಿಸಲಾಗುವುದು. ಗೌರವಾನ್ವಿತ ಸದಸ್ಯರುಗಳು ಈ ಸಭೆಗೆ ಹಾಜರಾಗಲು ಹಾಗೂ ಚರ್ಚೆಯಲ್ಲಿ ಪಾಲ್ಗೊಳ್ಳಲು ವಿನಂತಿಸಿದೆ.

ಪ್ರಾರ್ಥನೆ
ಸ್ವಾಗತ
ಶ್ರದ್ಧಾಂಜಲಿ

### ಕಾರ್ಯಸೂಚಿ :

ಅ) ದಿನಾಂಕ ೧-೫-೨೦೨೨ ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳ ದೃಢೀಕರಣ.
ಆ) ೨೦೨೧-೨೨ನೆಯ ಸಾಲಿನ ಲೆಕ್ಕಪರಿಶೋಧಿತವಾದ (ಆಡಿಟ್ ಆದ) ವಾರ್ಷಿಕ ಲೆಕ್ಕ ಪತ್ರಗಳ ಮಂಡನೆ.
ಇ) ೨೦೨೨-೨೩ರ ಸಾಲಿನ ವಾರ್ಷಿಕ ಆಯವ್ಯಯವನ್ನು ಚರ್ಚಿಸಿ ಅನುಮೋದಿಸುವ ಬಗ್ಗೆ.
ಈ) ೨೦೨೨-೨೩ರ ಸಾಲಿನ ಹಣಕಾಸಿನ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆ ನಿಗದಿಪಡಿಸುವ ಬಗ್ಗೆ.
ಉ) ೨೦೨೨-೨೩ನೇ ಸಾಲಿನ ಕ್ರಿಯಾಯೋಜನೆಗಳಿಗೆ ತಗಲುವ ವೆಚ್ಚಕ್ಕೆ ಅನುಮೋದನೆ ನೀಡುವ ಬಗ್ಗೆ.
ಊ) ಸದಸ್ಯರ ವಿರುದ್ಧ ಶಿಸ್ತು ವಿಚಾರಣಾ ವರದಿಗಳ ಬಗ್ಗೆ.
ಋ) ೨೦೨೨-೨೩ರ ಸಾಲಿನ ಕಾರ್ಯಕಾರಿ ಸಮಿತಿಯು ತಯಾರಿಸಿದ ಪರಿಷತ್ತಿನ ಕಾರ್ಯಚಟುವಟಿಕೆಗಳ ಯೋಜನೆಗಳ ಮಂಡನೆ.
ಎ) ಸದಸ್ಯರು ನಿಯಮಾನುಸಾರವಾಗಿ ಕಳುಹಿಸಿರುವ ಇತರೆ ಸೂಚನೆಗಳ ಬಗ್ಗೆ.
ಏ) ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇನ್ನಿತರೆ ವಿಷಯಗಳ ಕುರಿತು.

ಅಧ್ಯಕ್ಷರ ಭಾಷಣ
ವಂದನಾರ್ಪಣೆ

| | | |
|---|---|---|
| (ಬಿ.ಎಂ. ಪಟೇಲ್‌ಪಾಂಡು) | (ನೇ.ಭ. ರಾಮಲಿಂಗ ಶೆಟ್ಟಿ) | (ಡಾ. ಪದ್ಮಿನಿ ನಾಗರಾಜು) |
| ಗೌರವ ಕೋಶಾಧ್ಯಕ್ಷರು | ಗೌರವ ಕಾರ್ಯದರ್ಶಿ | ಗೌರವ ಕಾರ್ಯದರ್ಶಿ |

**ಸೂಚನೆ :** ೧. ೨೦೨೧-೨೨ನೇ ಸಾಲಿನ ವಾರ್ಷಿಕ ವರದಿಯನ್ನು **ದಿನಾಂಕ ೨೦-೦೩-೨೦೨೩ರಿಂದ** ಪರಿಷತ್ತಿನ ಕಚೇರಿ ವೇಳೆಯಲ್ಲಿ ಖುದ್ದಾಗಿ ಬಂದು ಅಥವಾ **ಅಂಚೆ ವೆಚ್ಚ ರೂ. ೨೦/-** ಕಳುಹಿಸಿ ಪಡೆಯಬಹುದಾಗಿದೆ.

೨. ಸಭೆಗೆ ಬರುವ ಕ.ಸಾ.ಪ. ಸದಸ್ಯರು, ಪರಿಷತ್ತಿನ ಗುರುತಿನ ಚೀಟಿ ಅಥವಾ ಜನತಾ ಪ್ರಾತಿನಿಧ್ಯ ಕಾಯ್ದೆಯಲ್ಲಿ ಸೂಚಿಸಿರುವ ಯಾವುದಾದರೂ ಒಂದು **ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರುವುದು.**

೩. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ವಿಷಯಗಳಿಗೆ ಸದಸ್ಯರುಗಳು ನಿಯಮಾನುಸಾರ ವಿಷಯಗಳನ್ನು ಲಿಖಿತ ರೂಪದಲ್ಲಿ **ಸಭೆಯ ದಿನಾಂಕಕ್ಕೆ ಕನಿಷ್ಠ ಎರಡು ವಾರಗಳಿಗೆ ಕಡಿಮೆ ಇಲ್ಲದಷ್ಟು ಮುಂಚಿತವಾಗಿ ಅಧ್ಯಕ್ಷರು, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು -** ಇವರಿಗೆ ಕಳುಹಿಸಿಕೊಡುವುದು. ತದನಂತರ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

೪. ವಾರ್ಷಿಕ ಸಾಮಾನ್ಯ ಸಭೆಯು ನಿಯಮ ೩೦ರ ಪ್ರಕಾರ ಡಿಸೆಂಬರ್ ಮೂವತ್ತೊಂದನೆ ದಿನಾಂಕದ ಒಳಗಾಗಿ ನಡೆಸಬೇಕಾಗಿತ್ತು. ಆದರೆ ೮೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ೨೦೨೩ರ ಜನವರಿ ೬, ೭, ೮ ರಂದು ನಡೆಸಿದ ಕಾರಣ, **ಸಹಕಾರ ಸಂಘಗಳ ಉಪ ನಿಬಂಧಕರ ಆದೇಶ ಸಂಖ್ಯೆ : ಡಿಆರ್‌ಬಿ-೨/ಎಸ್‌ಒಆರ್/ಎಜಿಎಂ/೦೨/೨೦೨೨-೨೩ ದಿನಾಂಕ ೨೮-೧೧-೨೦೨೨ರಂತೆ ಮಾರ್ಚ್-೨೦೨೩ರೊಳಗೆ ನಡೆಸಲು ಅನುಮತಿಯನ್ನು ಪಡೆಯಲಾಗಿದೆ.**

**೫. ಕ.ಸಾ.ಪ. ನಿಬಂಧನೆ ಸಂಖ್ಯೆ ೩೦(೬)ರಂತೆ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಈ ಸಭೆಯನ್ನು ನಿಗದಿಗೊಳಿಸಿದ ದಿನಾಂಕಕ್ಕಿಂತ ಕನಿಷ್ಠ ಇಪ್ಪತ್ತೊಂದು ದಿನಗಳ ಮುಂಚಿತವಾಗಿ ಸಾಮಾಜಿಕ ಜಾಲತಾಣ / ಮೊಬೈಲ್ ಆ್ಯಪ್ ಮೂಲಕ ಪ್ರಕಟಿಸಿ ಜಾರಿಗೊಳಿಸಲಾಗಿದೆ ಹಾಗೂ ಸಭಾ ಸೂಚನಾ ಪತ್ರದ ಪ್ರತಿಯನ್ನು ಪರಿಷತ್ತಿನ ಎಲ್ಲ ಘಟಕಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.**

<u>ವಿಶೇಷ ಸೂಚನೆ : ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡವರನ್ನು ಸಂಪರ್ಕಿಸಲು ಕೋರಿದೆ</u>

ಶ್ರೀ ಹಾಸಿಂಪೀರ್ ವಾಲೀಕಾರ್, ಅಧ್ಯಕ್ಷರು, ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೪೪೮೦೩೫೭೭೫
ಶ್ರೀ ಮಹಾದೇವ ಬಿ. ರೇಬಿನಾಳ, ಗೌರವ ಕಾರ್ಯದರ್ಶಿ, ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೪೪೯೭೬೮೧೯೨
ಶ್ರೀಮತಿ ಕೆ. ಸುನಂದಾ, ಗೌರವ ಕಾರ್ಯದರ್ಶಿ, ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೮೪೫೯೧೪೮೯
ಡಾ. ಸಂಗಪ್ಪ ಇರಸಿದ್ದಪ್ಪ ಮೇತ್ರಿ, ಗೌರವ ಕೋಶಾಧ್ಯಕ್ಷರು, ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೪೪೮೨೪೫೬೮೦
ಶ್ರೀ ಬಿ.ಎಂ. ಪಟೇಲ್‌ಪಾಂಡು, ಗೌರವ ಕೋಶಾಧ್ಯಕ್ಷರು, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೭೩೧೮೨೨೩೧೧
ಶ್ರೀ ನೇ.ಭ. ರಾಮಲಿಂಗ ಶೆಟ್ಟಿ, ಗೌರವ ಕಾರ್ಯದರ್ಶಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೪೪೮೬೮೬೩೩೮
ಡಾ. ಪದ್ಮಿನಿ ನಾಗರಾಜು, ಗೌರವ ಕಾರ್ಯದರ್ಶಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೮೪೪೧೮೭೫೦೦
ಶ್ರೀ ಪಾರ್ಶ್ವನಾಥ, ವ್ಯವಸ್ಥಾಪಕರು(ಪ್ರ), ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, ಮೊ. ೯೦೧೦೫೯೮೮೮